# ಪ್ರವಾಸದ ಸಾಹಸ: ನೆನಪು, ಮೆಲುಕು!

**ಅಮೆರಿಕದ ವಿವಿಧ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡುವ ಅವಕಾಶ ಒದಗಿ ಬಂದದ್ದು ಸುಮಾರು 10 ವರ್ಷಗಳ ಹಿಂದೆ. ಅದೊಂದು ಸಾಹಸಮಯ ಪ್ರವಾಸ. ನೆನಪಿನ ಬುತ್ತಿಯಲ್ಲಿ ಬೆಚ್ಚಗೆ ಕುಳಿತು ಆ ಕ್ಷಣಗಳನ್ನು ಮೆಲುಕು ಹಾಕಿದಾಗ ಕಚಗುಳಿ ನೀಡುತ್ತವೆ.**

■ **ಪ್ರಮೀಳ ಪ್ರಹ್ಲಾದ್**

ಸವಿ ಸವಿನೆನಪು ಸಾವಿರ ನೆನಪು...! ಅದರಲ್ಲಿ ವಿಶಿಷ್ಟವಾದೊಂದನ್ನು ಆಯ್ದು, ಮೆಲುಕು ಹಾಕುವ ಆಸೆ.

ಅದು 2008ನೇ ಇಸವಿ. ನಮಗೆ ಒದಗಿದ ಅಮೆರಿಕ ಪ್ರವಾಸದ ನೆನಪುಗಳು, ನಮ್ಮ ಹಿರಿಯ ಮೊಮ್ಮಗ ಅಕ್ಷಯ್‌ನ ಸ್ನಾತಕೋತ್ತರ ಪದವಿ ಪ್ರದಾನ ಸಮಾರಂಭದಲ್ಲಿ ಅವಕಾಶ ದೊರೆತದ್ದು. ಅದಕ್ಕಾಗಿ ನಾವು ಮೊದಲು ನ್ಯೂಜರ್ಸಿಗೆ ಹೋಗಬೇಕಿತ್ತು. ಅಲ್ಲಿ ನಮ್ಮ ಅಳಿಯಂದಿರ ಆಪ್ತಮಿತ್ರ ಡಾ. ರಾಮಮೂರ್ತಿ ಅವರ ಮನೆಯಲ್ಲಿ ಉಳಿದುಕೊಂಡೆವು. ಅವರ ಪ್ರೀತಿ, ಆದರ, ಆತಿಥ್ಯ ಎಂದಿಗೂ ಮರೆಯಲಾಗದ್ದು.

ಪದವಿ ಪ್ರದಾನ ಸಮಾರಂಭ ಫಿಲಿಡೆಲ್ಫಿಯಾದ, ಡ್ರೆಕ್ಸೆಲ್ ಯೂನಿವರ್ಸಿಟಿಯಲ್ಲಿ, ಅದು ಅಮೆರಿಕಾದ ಪ್ರಾಚೀನ ನಗರ, ಅಲ್ಲಿ ನಾವು ಮೊದಲು ನೋಡಿದ್ದು, ಅಮೆರಿಕದ ಬಿಡುಗಡೆಯ ಸಂಕೇತವಾದ 'ಲಿಬರ್ಟಿ ಬೆಲ್'. ಅಲ್ಲಿಯೇ ಆ ದೇಶದ ಸ್ವಾತಂತ್ರ್ಯದ ಘೋಷಣೆಯಾದದ್ದು, ಸಂವಿಧಾನದ ರಚನೆಯಾದ 'ಇಂಡಿಪೆಂಡೆನ್ಸ್ ಹಾಲ್'ನಲ್ಲಿ ಎಲ್ಲವನ್ನೂ ನೋಡುತ್ತ ಕೇಳುತ್ತ, ಒಂದು ರೀತಿಯ ಪುಳಕದ ಅನುಭವ – ಇತಿಹಾಸದ ಪುಟಗಳು ಕಣ್ ಮುಂದೆ.

ನಂತರ ನಾವು ಹೋದದ್ದು ನನ್ನ ಕನಸಿನ ತಾಣ 'ನಯಾಗರಾ ಜಲಪಾತಕ್ಕೆ'. ಓಹ್ ಅದೆಂಥ ಅದ್ಭುತ ನೋಟ, ಅನುಭವ!

ಮುಂದಿನ ಪಯಣ ವಾಷಿಂಗ್ಟನ್ ಡಿಸಿಗೆ. ಅಲ್ಲಿ ಕ್ಯಾಪಿಟಲ್ ಬಿಲ್ಡಿಂಗ್, ವೈಟ್ ಹೌಸ್ 'ಸ್ಮಿತ್ ಸೋನಿಯನ್ ಇನ್‌ಸ್ಟಿಟ್ಯೂಶನ್ ಎಲ್ಲದರ ಪಕ್ಷಿ ನೋಟ.

ಇನ್ನು ನಮ್ಮ ಎರಡನೆಯ ಪ್ರವಾಸ 2012ರಲ್ಲಿ ನಮ್ಮ ಕಿರಿಯ ಮೊಮ್ಮಗ ಅಭಿಜಿತ್‌ನ ಸ್ನಾತಕೋತ್ತರ ಪದವಿ ಪ್ರದಾನ ಸಮಾರಂಭಕ್ಕೆ ಹೋದದ್ದು, ನಂತರ ಪಶ್ಚಿಮ ತೀರದ ಮುಖ್ಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದು ನಮ್ಮ ಗುರಿಯಾಗಿತ್ತು.

ಈ ಕಾರ್ಯಕ್ರಮದ ಜವಾಬ್ದಾರಿಯನ್ನು ಅಕ್ಷಯ್ ತೆಗೆದುಕೊಂಡಿದ್ದು, ನಾವು ಕುಟುಂಬದವರೆಲ್ಲ ಒಟ್ಟಿಗೆ ಸೇರಿದ್ದು, ಒಂದು ರೋಚಕ ಅನುಭವ. ರೋಚಕ ಏಕೆಂದರೆ, ನಾವು ಇಲ್ಲಿಂದ ಮಗಳು ಅಳಿಯಂದಿರ ಜೊತೆ ಹೋಗುವುದರೊಡನೆ ಅಬುದಾಬಿಯಲ್ಲಿರುವ



ನಮ್ಮ ಕಿರಿಯ ಮಗಳು ಅಳಿಯ, ಮೊಮ್ಮಕ್ಕಳನ್ನು ನಮ್ಮ ಜೊತೆ ಸೇರಿಸಬೇಕೆಂಬುದು ಅಳಿಯ ಶಾಮ್‌ಸುಂದರ್ ಅವರ ಆಸೆ. ಅದಕ್ಕಾಗಿ, ಸ್ವಲ್ಪ ಕಾಲಾವಕಾಶದಲ್ಲಿಯೇ ಎಲ್ಲವನ್ನೂ ಹೊಂದಿಸಿ, ಬೇಕಾದ ವೀಸಾ ಮತ್ತಿತರ ದಾಖಲೆಗಳನ್ನೆಲ್ಲ ಪಡೆದು ಚಿಕ್ಕ ಮಗಳು ಸಂಸಾರ ಸಮೇತ ಲಂಡನ್‌ನಲ್ಲಿ ನಮ್ಮ ಜೊತೆಗೂಡುವಂತೆ ಮಾಡಿದ್ದು ನಿಜಕ್ಕೂ ಶ್ಲಾಘನೀಯ.

ಎಲ್ಲವೂ ಸುಸೂತ್ರವಾಗಿ ನಡೆದು ನಾವು ನ್ಯೂಜರ್ಸಿಗೆ ಹೋಗಿ, ನಂತರ ಲಾಸ್ ಏಂಜಲೀಸ್‌ನಿಂದ ಹತ್ತು ದಿನಗಳ ಪ್ರವಾಸದ ಏರ್ಪಾಟು. ನಾವು ಹತ್ತೂ ಮಂದಿ, ಬೆಳಗ್ಗೆ ಬೇಗ ಎದ್ದು ತಯಾರಾಗಿ, ಲಗ್ಗೇಜ್ ಸಮೇತ ಬಸ್ಸಿಗೆ ಹೊರಡುತ್ತಿದ್ದದ್ದು ಮರೆಯಲಾಗದ ದಿನಗಳು.

ಗ್ರಾಂಡ್ ಕ್ಯಾನಿಯನ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೋದ ಗೋಲ್ಡನ್‌ಗೇಟ್ ನೋಡುವುದು ನಮ್ಮ ಕನಸಾಗಿತ್ತು. ಅದು ನನಸಾದ ಖುಷಿ, ಹಾದಿಯಲ್ಲಿ, ಸ್ಯಾಂಡಿಯಾಗೊ ವೇಗಸ್, ಯೂನಿವರ್ಸಲ್, ಡಿಸ್ನಿ ಲ್ಯಾಂಡ್... ಹೀಗೆ ಎಷ್ಟೋ ಸಣ್ಣ ಪುಟ್ಟ ಸ್ಥಳಗಳನ್ನು ನೋಡಿದ್ದು.

ಈ ನಡುವೆ ನಾವು ಮಾರ್ಗ ಮಧ್ಯದಲ್ಲಿ ಲಂಡನ್‌ನಲ್ಲಿ ಇಳಿದು, ತಂಗಿ ಅಲ್ಲಿಯ ಟವರ್ ಬ್ರಿಡ್ಜ್ ಮತ್ತು ಅಲ್ಲಿಯ ಕ್ರೌನ್ ಮ್ಯೂಸಿಯಂನಲ್ಲಿ ಕೊಹಿನೂರ್ ವಜ್ರದ ದರ್ಶನವೂ ಆಯಿತು.

ಕೊನೆಗೆ ನಾವು ಬಂದದ್ದು ಅಕ್ಷಯ್ ಇರುವ ಊರು ಸಿಯಾಟಲ್‌ಗೆ, ಅಲ್ಲಿಗೆ ಸಮೀಪವಿರುವ 'ಮೌಂಟ್ ರೇನಿಯರ್'ಗೆ ಒಂದು ಭೇಟಿ ನೀಡಲಿಕ್ಕಾಗಿ. ಅದೊಂದು ಪುಟ್ಟ ಹಿಮಪರ್ವತ.

ಅಲ್ಲಿಂದ ಎರಡು ದಿನಗಳು ಕೆನಡಾಗೆ ರಸ್ತೆಯ ಮೂಲಕ ನಮ್ಮ ಪ್ರಯಾಣ.ಅಲ್ಲಿ ಕ್ಯಾಪಿಲೋನಾದ ಅರಣ್ಯ ಪ್ರದೇಶದ ದರ್ಶನ. ಪ್ರಪಂಚದ ಅತಿ ಎತ್ತರ ಹಾಗೂ ಉದ್ದದ ತೂಗು ಸೇತುವೆ ನೋಡಿದ್ದು.

ಎಷ್ಟೊಂದು ಸ್ಥಳಗಳನ್ನು ನೋಡಿದ್ದು, ಪಕ್ಷಿನೋಟವೇ ಆಗಿದ್ದರೂ ಏನೆಲ್ಲ ನೋಡಿದೆವು ಎಂಬ ಖುಷಿ ತೃಪ್ತಿ ನಮ್ಮದಾಗಿತ್ತು.

ಪ್ರವಾಸ ಸುಖಮಯವಾಗಿದ್ದದ್ದು ಅಲ್ಲಿಯ ವ್ಯವಸ್ಥೆ, ಹಿರಿಯ ನಾಗರಿಕರಿಗೆ ಅಲ್ಲಿ ಸಿಗುವ ಆದ್ಯತೆ, ಸೌಲಭ್ಯಗಳು ಬೆರಗುಗೊಳಿಸುವಂಥದ್ದು. ತಂತ್ರಜ್ಞಾನದ ಪೂರ್ಣ ಪ್ರಯೋಜನ ಪಡೆಯುತ್ತಿರುವ ದೇಶ ಅಮೆರಿಕ. ಅಲ್ಲಿಯ ಜನ ಕೂಡಾ ಎಲ್ಲಿ ಹೋದರೂ ಮುಗುಳ್ನಗೆಯಿಂದ ಸ್ವಾಗತಿಸಿ ಕುಶಲೋಪರಿ ವಿಚಾರಿಸುತ್ತಿದ್ದರು.

ಈ ಪ್ರವಾಸ ನಮ್ಮ ಮಟ್ಟಿಗೆ 'ಸಾಹಸಮಯ' ಆಗಿತ್ತು. ಕಾರಣ ನಾನು ಮತ್ತು ನನ್ನವರು ಹಿರಿಯ ನಾಗರಿಕರಾಗಿದ್ದು, ಮಕ್ಕಳು, ಮೊಮ್ಮಕ್ಕಳೊಡನೆ ಇಷ್ಟೆಲ್ಲ ತಿರುಗಾಟ ಮಾಡಿದ್ದು ಸಾಹಸವೇ ಸರಿ. ಅಂತೆಯೇ ಆ ದಿನಗಳು ಎಂದಿಗೂ ನಮ್ಮ ಮನದಲ್ಲಿ ಹಸಿರಾಗಿರುವ ಸವಿ ಸವಿ ನೆನಪು. ■